O.S. NO. 179/2022
PW - 1.
Dated 27-02-2025

ಸಾಕ್ಷಿಯನ್ನು ಈ ದಿನ ದಿನಾಂಕ 27-02-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 2ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

ನನ್ನ ಶಿಕ್ಷಣ ಎಸ್ ಎಸ್ ಎಲ್ ಸಿ ವರೆಗೆ ಆಗಿರುತ್ತದೆ. ವಾದ ಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. ಪ್ರಸ್ತುತ ದಾವೆಯಲ್ಲಿ 2 ನೇ ಪ್ರತಿವಾದಿ ಹಾಜರು ಮಾಡಿರುವ ದಾಖಲೆಗಳನ್ನು ನಾನು ನೊಡಿರುವುದಿಲ್ಲ. 2 ನೇ ಪ್ರತಿವಾದಿ ಯಾವ ಯಾವ ದಾಖಲೆಗಳನ್ನು ಹಾಜರು ಮಾಡಿದ್ದಾನೆ ಎಂದು ನನ್ನ ವಕೀಲರ ಮೂಲಕ ಚೌಕಾಶಿ ಮಾಡಿಲ್ಲ. ಪ್ರಸ್ತುತ ದಾವೆ ಮಾಡುವಾಗ ನಾನು ಶೇತ್ಕಿ ಕೆಲಸ ಮಾಡುತ್ತಿದ್ದೇನು. ಪ್ರಸ್ತುತ ದಾವೆ ಸಲ್ಲಿಸುವಾಗ ನನ್ನ ಹೆಸರಿನಲ್ಲಿ ಯಾವುದೇ ಶೇತ್ಕಿ ಜಮಿನು ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 285/9ಬ, 285/9, 285/10, 285/12, 285/13 ಮತ್ತು 285/14 ನೇದ್ದರಲ್ಲಿಯ ಜಮಿನುಗಳು ನನ್ನ ಹೆಸರಿನಲ್ಲಿ ಇದ್ದವು. ನಾನು ಹಾಜರು ಪಡಿಸಿದ ದಾವಾ ಜಮಿನಗಳ ಪಹಣಿ ಪತ್ರಿಕೆಗಳಲ್ಲಿ ನನ್ನ ಹೆಸರು ಎಲ್ಲಿಯೂ ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿ ಮೊದಲು ನನ್ನ ಹೆಸರಿಗೆ ಇದ್ದವು ನಂತರ 2 ನೇ ಪ್ರತಿವಾದಿ ತನ್ನ ಹೆಸರಿಗೆ ಪಹಣಿಗಳನ್ನು ಮಾಡಿಕೊಂಡಿದ್ದಾನೆ ಎಂದು ನುಡಿದಿರುತ್ತಾರೆ. ಪ್ರಸ್ತುತ ದಾವಾ ಸಲ್ಲಿಸುವ ಸಮಯದಲ್ಲಿ ನನ್ನ ಹೆಸರು ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಗಳಲ್ಲಿ ನನ್ನ ಮತ್ತು ನ್ನನ ತಂದೆ ಹೆಸರುಗಳನ್ನು ಕಡಿಮೆ ಮಾಡಿಸಿ 2

ನೇ ಪ್ರತಿವಾದಿ ತನ್ನ ಹೆಸರು ಸೇರಿಸಿಕೊಂಡಿರುತ್ತಾನೆ. 2 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಹೇಗೆ ಮಾಡಿಕೊಂಡನು ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ತನ್ನ ಹೆಸರಿಗೆ ಹಚ್ಚಿ ಕೊಂಡ ಪಹಣಿ ಪತ್ರಿಕೆಗಳನ್ನು ಪ್ರಶ್ನಿಸಿ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ವಗೈರೆ ಸಲ್ಲಿಸಿಲ್ಲ. ಪ್ರಸ್ತುತ ದಾವೆ ಸಲ್ಲಿಸುವಾಗ ನಾನು ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ವಿದ್ಯಾರ್ಥಿಗಳಿಗೆ ನೌಕರಿ ಹಚ್ಚುತ್ತೇನೆ ಅಂತಾ ಅವರಿಂದ ಹಣ ಪಡೆಯುತ್ತಿದ್ದೆ ಮತ್ತು ಅದೇ ನನ್ನ ಉದ್ಯೋಗ ಇತ್ತು, ಅವರು ಹಣ ವಾಪಸು ಕೇಳುವಾಗ ಅವರಿಗೆ ನಾನು ಚೆಕ್ಕು ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ 10-12 ಚೆಕ ಬೌನ್ಸ ಕೇಸುಗಳು ಇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಕಬ್ಜೆಯಲ್ಲಿ ಇದೆ ಎಂದು ತೋರಿಸಲು ಅವುಗಳ ರೆವಿನ್ಯೂ ಕಂದಾಯ ಪಾವತಿ ಮಾಡಿದ ರಶೀದಿಗಳು ಇರುವುದಿಲ್ಲ. ನಾನು ಹಾಜರು ಪಡಿಸಿದ ನಿಪಿ - 1 ರಿಂದ 4 ಮತ್ತು 6 ದಾಖಲೆಗಳು 2 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತವೆ ಎಂದರೆ ಸಾಕ್ಷಿ ತನ್ನ ಹೆಸರಿನಲ್ಲಿ ಖೊಟ್ಟಿ ಆಗಿ ಮಾಡಿಕೊಂಡಿದ್ದಾನೆ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ನಿಪಿ - 1 ರಿಂದ 4 ಮತ್ತು 6 ದಾಖಲೆಗಳು 2 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ದಾವಾ ಆಸ್ತಿಗಳ ಮೂಲ ಮಾಲಿಕ ಬಸವಣ್ಣೆಪ್ಪ ಎಂದರೆ ಸರಿ. ಸದರಿ ಬಸವಣ್ಣೆಪ್ಪ ರವರ ಜನ್ಮ ದಿನಾಂಕ ಹೇಳಲು ಬರುವುದಿಲ್ಲ. ಅವರ ಜನ್ಮ ದಿನಾಂಕ 30-05-1937 ಎಂದರೆ ಸರಿ. ಸದರಿ ಬಸವಣ್ಣೆಪ್ಪ ತನ್ನ ಜೀವಿತ ಅವಧಿಯಲ್ಲಿ ಸರಕಾರಿ ಶಾಲೆಯಲ್ಲಿ ಶಿಕ್ಷಕ ಅಂತಾ ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಅವರು ದಿನಾಂಕ 01-01-1958 ರಂದು ಶಿಕ್ಷಕರು ಅಂತಾ ನೇಮಕಗೊಂಡರು ಎಂದರೆ

O.S. NO. 179/2022

PW - 1.

Dated 27-02-2025

ಸರಿ. ದಾವಾದ ಎಲ್ಲ ಆಸ್ತಿಗಳು ಸದರಿ ಬಸವಣ್ಣೆಪ್ಪ ರವರು ಸ್ವಂತ ಗಳಿಸಿದ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಲ್ಲದ ಸರ್ವೆ ನಂ. 107/3 ಸಹ ಸದರಿ ಬಸವಣ್ಣೆಪ್ಪ ರವರ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯ ತಂದೆ ಹೆಸರು ಶಿವಪ್ಪ ಇರುತ್ತದೆ. ನನ್ನ ತಂದೆಯ ತಾಯಿ ಹೆಸರು ಬಸಮ್ಮ ಇರುತ್ತದೆ. ನನ್ನ ಅಜ್ಜ ಶಿವಪ್ಪನ ಹೆಸರಿನಲ್ಲಿ ಯಾವುದಾದರೂ ಆಸ್ತಿ ಇತ್ತಾ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ಸದರಿ ಶಿವಪ್ಪ ಮತ್ತು ಬಸಮ್ಮ ರವರಿಗೆ ಯಾವುದೇ ಸ್ಥಿರಾಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನನ್ನ ಅಜ್ಜ ಮತ್ತು ಅಜ್ಜಿ ಹೆಸರಿನಲ್ಲಿ ಆಸ್ತಿಗಳು ಇದ್ದವು ಎಂದು ನಮೂದು ಮಾಡಲು ತೊಂದರ ಇರಲಿಲ್ಲ ಎಂದರೆ ಸರಿ. ಸರ್ವೆ ನಂ. 107 ಮತ್ತು ಸರ್ವೆ ನಂ. 285 ನೇದ್ದರಲ್ಲಿಯ ಜಮಿನುಗಳು ನನ್ನ ಅಜ್ಜಿ ಬಸಮ್ಮ ಖರೀದಿ ಮಾಡಿರುತ್ತಾಳೆ. ಈ ಕುರಿತು ನನ್ನ ಹತ್ತಿರ ಖರೀದಿ ಪತ್ರಗಳಾಗಲಿ, ಉತಾರಗಳಾಗಲಿ ಇರುವುದಿಲ್ಲ. ಸರ್ವೆ ನಂ. 107/3 ಮೊದಲು ಬಸವಣ್ಣೆಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಅಜ್ಜ ಹೇಗೆ ಪಡೆದನು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಮತ್ತು ಸರ್ವೆ ನಂ. 107/3 ಆಸ್ತಿಗಳು ನನ್ನ ಬಸವಣ್ಣೆಪ್ಪ ಸ್ವಂತ ಗಳಿಸಿದ ಆಸ್ತಿಗಳು ಇದ್ದುದರಿಂದ ನನ್ನ ಅಜ್ಜ ಮತ್ತು ಅಜ್ಜಿಯ ಹೆಸರಿನಲ್ಲಿ ಯಾವುದೇ ಆಸ್ತಿಗಳ ಉತಾರಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ತೋರಿಸಿದ ವಂಶಾವಳಿಯಲ್ಲಿ ನನ್ನ ಅಜ್ಜ ಮತ್ತು ಅಜ್ಜಿಯ ಹೆಸರು ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

O.S. NO. 179/2022
PW - 1.
Dated 27-02-2025

ಬಸವಣ್ಣೆಪ್ಪ ರವರು 1965 ನೇ ಸಾಲಿನಲ್ಲಿ ಪಾರ್ವತೆವ್ವ ಎಂಬವವಳೊಂದಿಗೆ ಮದುವೆ ಮಾಡಿಕೊಂಡನು ಎಂದರೆ ಸರಿಯಲ್ಲ. ಅವರಿಬ್ಬರ ದಾಂಪತ್ಯ ಜೀವನದಿಂದ ದಿನಾಂಕ 03-07-1968 ರಂದು ನೀಲವ್ವ ಅಲಿಯಾಸ ಕಾಶವ್ವ ಎಂಬ ಹೆಣ್ಣು ಮಗಳು ಜನಿಸಿದಳು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ನೀಲವ್ವ ಅಲಿಯಾಸ ಕಾಶವ್ವ ಯಾರು ಎಂದು ನನಗೆ ಗೊತ್ತಿಲ್ಲ ಎಂದು ಪುನಃ ನುಡಿದಿರುತ್ತಾರೆ. ದಿನಾಂಕ 20-11-1970 ರಲ್ಲಿ ಸದರಿ ಬಸವಣ್ಣೆಪ್ಪ ಮತ್ತು ಪಾರ್ವತೆವ್ವ ರವರಿಗೆ ಶಾಂತವ್ವ ಎಂಬ 2 ನೇ ಮಗಳು ಜನಿಸಿದಳು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕ 20-07-1974 ರಲ್ಲಿ ಸದರಿ ಬಸವಣ್ಣೆಪ್ಪ ಮತ್ತು ಪಾರ್ವತೆವ್ವ ರವರಿಗೆ ಬೇಬಿ ಎಂಬ 3 ನೇ ಹೆಣ್ಣು ಮಗಳು ಜನಿಸಿದಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಈ 3 ಜನ ಹೆಣ್ಣು ಮಕ್ಕಳು ತಮ್ಮ ಜನನದ ದಿನಾಂಕದಿಂದ ತಮ್ಮ ಲಗ್ನ ಆಗುವವರೆಗೆ ಅವರು ಬಸವಣ್ಣೆಪ್ಪ ಮತ್ತು ಪಾರ್ವತೆವ್ವ ರವರು ಜೊತೆಯಲ್ಲಿ ಇದ್ದರು ಎಂದರೆ ಸುಳ್ಳು. ನನ್ನ ಜನ್ಮ ದಿನಾಂಕ 30-07-1984 ಇರುತ್ತದೆ. ಬಸವಣ್ಣೆಪ್ಪ ಮತ್ತು ಪಾರ್ವತೆವ್ವ ರವರಿಗೆ ಈ ಮೇಲೆ ಹೇಳಿದ 3 ಜನ ಹೆಣ್ಣು ಮಕ್ಕಳು ಹುಟ್ಟಿಲ್ಲ ಎಂದು ಯಾರು ಹೇಳಿದರು ಎಂದು ಸೂಚಿಸಲಾಗಿ ಸಾಕ್ಷಿ ನಾನೇ ಹೇಳುತ್ತಿದ್ದೇನೆ. ನಾನು ಮತ್ತು ನನ್ನ ತಂದೆ ಇಬ್ಬರೇ ಇದ್ದೇವು ಹೀಗಾಗಿ ಹೇಳುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಈಗ ತೊರಿಸಸಿದ ಜಾತಿ ಮತ್ತು ಜನ್ಮ ದಿನಾಂಕ ಪ್ರಮಾಣ ಪತ್ರ ದಲ್ಲಿ ಯಾರ ಹೆಸರು ಬರೆದಿದೆ ಎಂದರೆ ಸಾಕ್ಷಿ ಕಾಶವ್ವ ಬಸವಣ್ಣೆಪ್ಪ ಪರಸಪ್ಪಗೊಳ ಅಂತಾ ಇರುತ್ತದೆ.

O.S. NO. 179/2022
PW - 1.
Dated 27-02-2025

ಸಾಕ್ಷಿ ಮುಂದುವರೆದು ಇವೆಲ್ಲ ಸುಳ್ಳು ದಾಖಲೆ ಮಾಡಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ಮತ್ತೊಂದು ಜಾತಿ, ಜನನ ಪ್ರಮಾಣ ಪತ್ರ ದಲ್ಲಿ ಶಾಂತವ್ವ ಬಸಲಿಂಗಪ್ಪ ಪರಸಪ್ಪಗೋಳ ಅಂತಾ ಇರುತ್ತದೆ. ಸಾಕ್ಷಿ ಮುಂದುವರೆದು ಅದು ಖೊಟ್ಟಿ ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಈಗ ತೋರಿಸಿದ ಮತ್ತೊಂದು ದಾಖಲೆ ವರ್ಗಾವಣೆ ಪ್ರಮಾಣ ಪತ್ರದಲ್ಲಿ ಬೇಬಿ ಬಸವಣ್ಣೆಪ್ಪ ಪರಸಪ್ಪಗೋಳ ಅಂತಾ ಇರುತ್ತದೆ. ಸಾಕ್ಷಿ ಅವೆಲ್ಲ ಖೊಟ್ಟಿ ಆಗಿ ಹೆಸರು ಸೇರಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಬಸವಣ್ಣೆಪ್ಪ ಮತ್ತು ಪಾರ್ವತೆವ್ವ ರವರು ತಮ್ಮ ಈ ಮೇಲಿನ 3 ಜನ ಹೆಣ್ಣು ಮಕ್ಕಳ ಮದುವೆಯನ್ನು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈ ಮೇಲೆ ಹೇಳಿದ 3 ಜನ ಹೆಣ್ಣು ಮಕ್ಕಳು ಬಸವಣ್ಣೆಪ್ಪನ ಮಕ್ಕಳು ಅಂತಾ ಲೊಸಕಸಭೆ, ವಿಧಾನ ಸಭೆ ಮತ್ತು ಸ್ಥಳಿಯ ಚುನಾವಣೆಗಳಲ್ಲಿ ಮತದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಅಜ್ಜ ಶಿವಪ್ಪ ಯಾವಾಗ ತಿರಿಕೊಂಡರು ಎಂದು ನನಗೆ ಗೊತ್ತಿಲ್ಲ. ಅವರು ಮೃತಪಟ್ಟ ನಂತರ ಬಸವಣ್ಣೆಪ್ಪ, ಪಾರ್ವತೆವ್ವ ಮತ್ತು ನನ್ನ ಅಜ್ಜಿ ಬಸಮ್ಮ ಒಂದೇ ಮನೆಯಲ್ಲಿ ಇರುತ್ತಿದ್ದರು ಎಂದರೆ ಸಾಕ್ಷಿ ಪಾರ್ವತೆವ್ವ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಅಜ್ಜಿ ಬಸಮ್ಮ ಬಸವಣ್ಣೆಪ್ಪ ರವಾರಿಗೆ 3 ಜನ ಹೆಣ್ಣು ಮಕ್ಕಳು ಮಾತ್ರ ಜಸನಿದ್ದಾರೆ ಬೇರೊಂದು ಲಗ್ನ ಮಾಡಿಕೊ ಎಂದು ಹೇಳುತ್ತಿದ್ದರು ಎಂದರೆ ಸುಳ್ಳು. ಬಸವಣ್ಣೆಪ್ಪ ಲಗ್ನ ಆಗಲೇ ಆಗಿದ್ದರಿಂದ ಅವರಿಗೆ ಬೇರೆ ಯಾರು ಹೆಣ್ಣು ಕೊಡಲು ಮುಂದೆ

ಬಂದಿರಲಿಲ್ಲ ಎಂದರೆ ಸುಳ್ಳು.

ನನ್ನ ತಾಯಿ ಅನಿತಾ ಕಕ್ಕೇರಿಯ ಅಂಗನವಾಡಿ ಯಲ್ಲಿ ಟೀಚರ ಅಂತಾ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಬಸವಣ್ಣೆಪ್ಪ ಮತ್ತು ನನ್ನ ತಾಯಿ ಅನಿತಾ ರವರ ಮಧ್ಯೆ ಅನೈತಿಕ ಸಂಬಂಧ ಇತ್ತು ಎಂದರೆ ಸುಳ್ಳು. ನನ್ನ ತಾಯಿ ಅನಿತಾ ಬಸವಣ್ಣೆಪ್ಪ ರವರಿಗೆ ಕಾನೂನು ಬದ್ಧವಾಗಿ ಮದುವೆ ಮಾಡಿಕೊಂಡಿದ್ದರು. ಅವರ ಮದುವೆ ಗಿರಿಯಾಲ ಗ್ರಾಮದಲ್ಲಿ ಆಗಿರುತ್ತದೆ. ತಾರೀಖು, ತಿಂಗಳು ಇಸ್ವಿ ಗೊತ್ತಿಲ್ಲ. ಅವರ ಮದುವೆ ಆದ ಬಗ್ಗೆ ದಾಖಲೆಗಳು ಇವೇಯಾ ಎಂದರೆ ಸಾಕ್ಷಿ ದಾಖಲೆಗಳು ಇಲ್ಲ ಸಾಕ್ಷಿ ದಾರರು ಜೀವಂತ ಇದ್ದಾರೆ ಎಂದು ನುಡಿದಿರುತ್ತಾರೆ. ನನ್ನ ತಾಯಿ ಅನಿತಾ ಬಸವಣ್ಣೆಪ್ಪ ರವರ ಜೊತೆ ಮದುವೆ ಮಾಡಿಕೊಂಡಾಗ ನನ್ನ ತಾಯಿ ವಯಸ್ಸು ಎಷ್ಟು ಇತ್ತು ಎಂದರೆ ವಯಸ್ಸು ಗೊತ್ತಿಲ್ಲ ಆದರೆ ಅವಳು 10 ನೇ ತರಗತಿ ಓದು ಮುಗಿಸಿದ ತಕ್ಷಣ ಮದುವೆ ಮಾಡಿಕೊಂಡಿರುತ್ತಾಳೆ ಎಂದು ನುಡಿದಿರುತ್ತಾರೆ. ನನ್ನ ತಾಯಿ ಮತ್ತು ಬಸವಣ್ಣೆಪ್ಪ ರವರ ಮದುವೆ ಮಾಡಿದ ಪಂಡಿತರ ಹೆಸರು ನನಗೆ ಗೊತ್ತಿಲ್ಲ. ಅವರ ಮದುವೆ ಯಾದಿ ಆಗಲಿ, ಯಾವುದಾದರೂ ಕಾಗದ ಆಗಲಿ ನಿಮ್ಮ ಹತ್ತಿರ ಇದೆಯಾ ಎಂದರೆ ಇಲ್ಲ. ನಾನು ಜನಿಸುವ ಎಷ್ಟು ಪೂರ್ವ ಅನಿತಾ ಮತ್ತು ಬಸವಣ್ಣೆಪ್ಪ ರವರ ಮದುವೆ ಆಗಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಬಸವಣ್ಣೆಪ್ಪ ಮತ್ತು ಅನಿತಾ ರವರ ಅನೈತಿಕ ಸಂಬದದಿಂದ ಜನಿಸಿದ ಕಾನೂನು ಸಮ್ಮತವಲ್ಲದ ಮಗ ಇರುತ್ತೇನೆ ಎಂದರೆ ಸರಿಯಲ್ಲ. ನಾನು ಜನಿಸಿದ 3 ತಿಂಗಳು ನಂತರ ನನ್ನ ತಾಯಿ

O.S. NO. 179/2022

PW - 1.

Dated 27-02-2025

ಅನಿತಾ ರವರು ನನ್ನನ್ನು ಬೇಡ ಅಂತಾ ಬಸವಣ್ಣೆಪ್ಪ ಮತ್ತು ಪಾರ್ವತೆವ್ವರವರ ಸುಪರ್ದಿಗೆ ಕೊಟ್ಟು ಹೊಗಿರುತ್ತಾಳೆ ಎಂದರೆ ಸರಿಯಲ್ಲ. ನನ್ನನ್ನು ಬಸವಣ್ಣೆಪ್ಪ, ಪಾರ್ವತೆವ್ವ ಮತ್ತು ಅವರಿಬ್ಬರ 3 ಜನ ಹೆಣ್ಣು ಮಕ್ಕಳು ನನ್ನನ್ನು ಪಾಲನೆ ಪೊಷಣೆ ಮಾಡಿದ್ದರೆ ಎಂದರೆ ಸುಳ್ಳು. ಸಾಕ್ಷಿ ನನ್ನ ಅತ್ತೆ ಮತ್ತು ಅತ್ತೆ ಮಗಳು ನನ್ನ ಪಾಲನೆ ಪೊಷಣೆ ಮಾಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ಈ ಕುರಿತು ನಾನು ನನ್ನ ವಾದ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ನಾನು 3 ತಿಂಗಳದವನು ಇದ್ದಾಗ ನನ್ನ ತಾಯಿ ಅನಿತಾ ರವರು ನನ್ನನ್ನು ಬಸವಣ್ಣೆಪ್ಪ ಮತ್ತು ಪಾರ್ವತೆವ್ವರವರಿಗೆ ಕೊಟ್ಟು ಹೊದ ನಂತರ ಅವಳು ವಾಪಸು ತಿಗಡಿ ಗ್ರಾಮಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.